# ಪರ್ಯಾಯ ಶೈಕ್ಷಣಿಕ ಯೋಜನೆ : 2021–22

**ತರಗತಿ : 10** **ತಿಂಗಳು : ಸೆಪ್ಟೆಂಬರ್–2021** **ವಿಷಯ : ದ್ವಿತೀಯ ಭಾಷೆ – ಕನ್ನಡ**

| ಕ್ರ.ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಸೆಪ್ಟೆಂಬರ್** ಮೊದಲನೆಯ ವಾರ | ಅಸಿ–ಮಸಿ–ಕೃಷಿ<br>• ಪ್ರಬಂಧ ಸಾಹಿತ್ಯದ ಪರಿಚಯ ಮಾಡಿಕೊಳ್ಳುವರು | • ಸರಳ ಪ್ರಬಂಧಗಳನ್ನು ಸಂಗ್ರಹಿಸಿ ಓದಲು ಸೂಚಿಸುವುದು. | |
| | | • ಲೇಖಕರಾದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಯವರ ಪರಿಚಯ | • ಲೇಖಕರ ಪರಿಚಯದ ಆಡಿಯೋವನ್ನು ಕೇಳಿಸುವುದು. ನಂತರ ಆಲಿಸಿದ ಅಂಶಗಳನ್ನು ಆಧರಿಸಿ ವಾಕ್ಯರೂಪದಲ್ಲಿ ಬರೆಯಲು ತಿಳಿಸುವುದು.<br>• (ಆನ್ಲೈನ್ ತರಗತಿಗಳಲ್ಲಿ ಮಕ್ಕಳಿಂದ ಕವಿ ಪರಿಚಯ ಹೇಳಿಸಬಹುದು) | ಕವಿ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಸುವುದು |
| | | • ಸರಳ ಭಾಷಾಂಶಗಳನ್ನು ತಿಳಿಯುವುದು | • ಪಾಠದಲ್ಲಿ ಬಂದಿರುವ ಹೊಸ ಪದಗಳಿಗೆ ನಿಘಂಟಿನ ಸಹಾಯದಿಂದ ಅರ್ಥ ಹುಡುಕಲು ಹೇಳುವುದು. ನಂತರ ಆ ಪದಗಳನ್ನು ಬಳಸಿ ಸ್ವಂತ ವಾಕ್ಯದಲ್ಲಿ ಬರೆಯಲು ಹೇಳುವುದು<br>• ವಿಭಕ್ತಿ ಪ್ರತ್ಯಯ ಹೊಂದಿರುವ ಪದಗಳನ್ನು ಗುರುತಿಸಿ ಬರೆಯಲು ತಿಳಿಸುವುದು | |
| | | • ದೇಶದ ರಕ್ಷಣೆಯಲ್ಲಿ ಸೈನ್ಯದ ಮಹತ್ವವನ್ನು ತಿಳಿಯುವುದು | • ಕಲಿಕಾಂಶಗಳನ್ನು ಅಭ್ಯಾಸ ಹಾಳೆಯ ಮೂಲಕ ಅರ್ಥ ಮಾಡಿಸುವುದು (ಅಭ್ಯಾಸ ಹಾಳೆ 1) | |

| | | | | |
|---|---|---|---|---|
| | | • ದೇಶದ ಅಭಿವೃದ್ಧಿಯಲ್ಲಿ ಸಾಹಿತ್ಯದ ಪಾತ್ರವನ್ನು ಅರಿಯುವುದು | • ಪ್ರಶ್ನೋತ್ತರ ಚಟುವಟಿಕೆ<br>ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುತ್ತ, ಅಲ್ಲಲ್ಲಿ ವಿವರಣೆ ನೀಡುತ್ತಾ, ಪ್ರಶ್ನೆಗಳ ಮೂಲಕ ಸಾಹಿತ್ಯದ ಮಹತ್ವವನ್ನು ಅರ್ಥೈಸುವುದು | ಖಡ್ಗಕ್ಕಿಂತ ಪೆನ್ನು ಹರಿತ – ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ |
| | | • ಕೃಷಿಕ ದೇಶದ ಬೆನ್ನೆಲುಬು ಎಂಬುದನ್ನು ಅರ್ಥೈಸುವುದು | • ಕಲಿಕಾಂಶವನ್ನು ಅಭ್ಯಾಸ ಹಾಳೆಯ ಮೂಲಕ ಅರ್ಥ ಮಾಡಿಸುವುದು<br>(ಅಭ್ಯಾಸ ಹಾಳೆ – 2) | ಕೃಷಿಕ ನಾಡಿನ ಬೆನ್ನೆಲುಬು – ಈ ವಿಷಯದ ಕುರಿತು ಕಿರು ಪ್ರಬಂಧ ರಚಿಸಿ |
| | **ಸೆಪ್ಟೆಂಬರ್**<br>ಎರಡನೆಯ ವಾರ | • ಸಂಸ್ಕೃತ ಸಂಧಿಗಳ ನಿಯಮಗಳನ್ನು ಅರಿತು ಪದಗಳನ್ನು ಗುರುತಿಸಿ ಸಂಧಿಯನ್ನು ಹೆಸರಿಸುವರು | • ಅಭ್ಯಾಸ ಹಾಳೆಯ ಮೂಲಕ ಸಂಧಿಪದಗಳನ್ನು ಪರಿಚಯಿಸುವುದು<br>(ಅಭ್ಯಾಸ ಹಾಳೆ –3 ಮತ್ತು ಅಭ್ಯಾಸ ಹಾಳೆ 4) | ಘಟಕ ಪರೀಕ್ಷೆ |
| | | **ಬೋಧಿವೃಕ್ಷದ ಹಾಡು**<br>• ವಿವಿಧ ಧರ್ಮ ಹಾಗೂ ಧರ್ಮಸ್ಥಾಪಕರ ಪರಿಚಯ ಮಾಡಿಕೊಳ್ಳುವುದು | • ಧರ್ಮ ಹಾಗೂ ಧರ್ಮ ಸ್ಥಾಪಕರ ಮಿಂಚುಪಟ್ಟಿಗಳನ್ನು ನೀಡಿ ಸರಿಹೊಂದಿಸಿ ಹೇಳಲು ತಿಳಿಸುವುದು | |
| | | • ಕೊಟ್ಟಿರುವ ವಿಷಯಾಂಶಗಳನ್ನು ಆಧರಿಸಿ ಸೂಕ್ತ ವಾಕ್ಯ ರಚಿಸುವ ಸಾಮರ್ಥ್ಯ ಬೆಳೆಸುವುದು | • ಕವಿ ಬಸವರಾಜ ಸಬರದರವರ ಕಾಲ, ಸ್ಥಳ, ಕೃತಿ, ಪ್ರಶಸ್ತಿಗಳ ಮಾಹಿತಿ ನೀಡಿ ವಾಕ್ಯರೂಪದಲ್ಲಿ ಹೇಳಲು ತಿಳಿಸುವುದು<br>• ಅಭ್ಯಾಸ ಹಾಳೆ –5 | ಕವಿ ಪರಿಚಯ ಬರೆಸುವುದು |
| | | • ಪದ್ಯವನ್ನು ರಾಗವಾಗಿ ಹಾಡಿ ಸಾಹಿತ್ಯವನ್ನು ಆಸ್ವಾದಿಸುವುದು | • ಪದ್ಯಭಾಗವನ್ನು ರಾಗವಾಗಿ ಹಾಡಿರುವ ಧ್ವನಿಸುರುಳಿ ಕೇಳಿಸುವುದು (ಶಿಕ್ಷಕರೇ ಸ್ವತಃ ಹಾಡಿ, ಅದನ್ನು ರೆಕಾರ್ಡ್ ಮಾಡಿ | |

| | | | | |
|---|---|---|---|---|
| | | | ಕಳಿಸಬಹುದು)<br>• ಮಕ್ಕಳಿಂದ ಹಾಡಿಸುವುದು (ಮಕ್ಕಳು ಪದ್ಯವನ್ನು ಹಾಡಿ ರೆಕಾರ್ಡ್ ಮಾಡಿ ಶಿಕ್ಷಕರಿಗೆ ಕಳುಹಿಸಬಹುದು) | |
| | | • ಪದ್ಯದ ಭಾವಾರ್ಥವನ್ನು ಗ್ರಹಿಸುವುದು | • ಶಿಕ್ಷಕರು ಸಂವಾದ/ ಚರ್ಚೆಯ ಮೂಲಕ ಪದ್ಯದ ಭಾವಾರ್ಥವನ್ನು ವಿವರಿಸುವುದು (ಶಿಕ್ಷಕರು ಪದ್ಯದ ಭಾವಾರ್ಥ ವಿವರಿಸಿರುವ ಆಡಿಯೋ ಕೇಳಿಸಬಹುದು)<br>• ಅಭ್ಯಾಸ ಹಾಳೆಯ ಮೂಲಕ ಮಕ್ಕಳು ಪದ್ಯದ ಭಾವಾರ್ಥವನ್ನು ವಿವರಿಸುವುದನ್ನು ಅಭ್ಯಾಸ ಮಾಡುವುದು<br>(ಅಭ್ಯಾಸ ಹಾಳೆ 6 ) | |
| | **ಸೆಪ್ಟೆಂಬರ್** ಮೂರನೆಯ ವಾರ | • ಪದ್ಯವನ್ನು ಕಂಠಪಾಠ ಮಾಡುವುದು | • ಕಂಠಪಾಠಕ್ಕೆ ನಿಗದಿಪಡಿಸಿರುವ ಕಂಡಿಕೆಗಳನ್ನು ಮಕ್ಕಳು ಕಂಠಪಾಠ ಮಾಡಿ ರಾಗವಾಗಿ ಹಾಡಲು ಸೂಚಿಸುವುದು | ಕಂಠಪಾಠ ಮಾಡಿರುವ ಪದ್ಯಭಾಗವನ್ನು ಬರೆಸುವುದು |
| | | • ವ್ಯಾಕರಣಾಂಶಗಳನ್ನು ಪರಿಚಯಿಸುವುದು | • ಸಂಧಿ, ಸಮಾಸಗಳ ಬಗ್ಗೆ ತಿಳಿಸಿ ಅಭ್ಯಾಸ ಹಾಳೆಯಲ್ಲಿನ ಚಟುವಟಿಕೆಗಳ ಮೂಲಕ ಅರ್ಥ ಮಾಡಿಸುವುದು<br>(ಅಭ್ಯಾಸ ಹಾಳೆ 7) | ಘಟಕ ಪರೀಕ್ಷೆ |
| | | **ಸವಿಚೈತ್ರ**<br>• ಚಾಂದ್ರಮಾನ ಮಾಸ ಹಾಗೂ ಋತುಗಳನ್ನು ಪರಿಚಯಿಸುವುದು | • ಶಿಕ್ಷಕರು ಚಾಂದ್ರಮಾನ ಮಾಸ ಹಾಗೂ ಋತುಗಳನ್ನು ಪಿಪಿಟಿ, ಚಾರ್ಟ್ ಅಥವಾ ಮಿಂಚುಪಟ್ಟಿಗಳ ಮೂಲಕ ಪರಿಚಯಿಸುವರು. (ಶಿಕ್ಷಕರು ಋತುಗಳು ಹಾಗೂ ಅವುಗಳು ಒಳಗೊಂಡ ಮಾಸಗಳನ್ನು ಪರಿಚಯಿಸುವ ಆಡಿಯೋ ಮಾಡಿ ಮಕ್ಕಳಿಗೆ ಕೇಳಿಸಬಹುದು) | |

| | | | | |
|---|---|---|---|---|
| | | • ಮೌನವಾಗಿ ಓದಿ ವಿಷಯಾಂಶವನ್ನು ಗ್ರಹಿಸುವ ಸಾಮರ್ಥ್ಯ ಬೆಳೆಸುವುದು | • ಕವಿ ಪರಿಚಯ ಭಾಗವನ್ನು ಮೌನವಾಗಿ ಓದಿ ಅರ್ಥ ಮಾಡಿಕೊಳ್ಳಲು ಸೂಚಿಸುವುದು. ನಂತರ ವಾಕ್ಯರೂಪದಲ್ಲಿ ಕವಿಪರಿಚಯ ಬರೆಯಲು ತಿಳಿಸುವುದು | |
| | **ಸೆಪ್ಟೆಂಬರ್** ನಾಲ್ಕನೆಯ ವಾರ | • ಪದ್ಯವನ್ನು ರಾಗವಾಗಿ ಹಾಡುವುದು | • ಕಂಠಪಾಠಕ್ಕೆ ನಿಗದಿಪಡಿಸಿದ ಪದ್ಯದ ಭಾಗವನ್ನು ಕಂಠಪಾಠ ಮಾಡಿ ರಾಗವಾಗಿ ಹಾಡಲು ತಿಳಿಸುವುದು | ಕಂಠಪಾಠ ಮಾಡಿದ ಪದ್ಯಭಾಗವನ್ನು ತಪ್ಪಿಲ್ಲದೇ ಬರೆಯಲು ತಿಳಿಸುವುದು |
| | | • ಪದ್ಯದ ಭಾವಾರ್ಥ ಅರಿತು ತನ್ನ ಮಾತುಗಳಲ್ಲಿ ಅಭಿವ್ಯಕ್ತಿಸುವುದು | • ಶಿಕ್ಷಕರು ವಿವರಣೆ ಮೂಲಕ ಪ್ರಶ್ನೋತ್ತರ ಚಟುವಟಿಕೆ ಮೂಲಕ ಪದ್ಯದ ಭಾವಾರ್ಥವನ್ನು ವಿವರಿಸುವರು. | |
| | | • ಪದ್ಯದ ಭಾವಾರ್ಥ ಗ್ರಹಿಸಿ ಏನು? ಏಕೆ? ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯ ಬೆಳೆಸುವುದು | • ಮೌಖಿಕ ಪ್ರಶ್ನೋತ್ತರ ಚಟುವಟಿಕೆ | |
| | | • ಸೃಜನಶೀಲ ಸಾಮರ್ಥ್ಯವನ್ನು ಬೆಳೆಸುವುದು | • ಮಕ್ಕಳು ತಾವು ಕಂಡ ಪ್ರಕೃತಿಯ ಸೊಬಗನ್ನು ಕುರಿತು ತಮ್ಮದೇ ಕಲ್ಪನೆಯಲ್ಲಿ ಒಂದು ಸರಳ ಪದ್ಯವನ್ನು ರಚಿಸಲು ಪ್ರೇರೇಪಿಸುವುದು | ಕವನ ರಚನೆ |
| | | • ವ್ಯಾಕರಣಾಂಶಗಳ ಪರಿಚಯಿಸುವುದು | • ತತ್ಸಮ ತದ್ಭವ, ನಾನಾರ್ಥ, ವಿರುದ್ಧಾರ್ಥಕ ಪದಗಳನ್ನು ಅಭ್ಯಾಸ ಹಾಳೆಯ ಮೂಲಕ ಪರಿಚಯಿಸುವುದು | ಘಟಕ ಪರೀಕ್ಷೆ |

## ಅಭ್ಯಾಸ ಹಾಳೆ 1

### ಅಸಿ–ಮಸಿ–ಕೃಷಿ

ಪಾಠಭಾಗವನ್ನು ಓದಿ ಅರ್ಥೈಸಿಕೊಂಡು, ಕೆಳಗೆ ನೀಡಿರುವ ವಾಕ್ಯಭಾಗಗಳನ್ನು ಸೂಕ್ತವಾಗಿ ಹೊಂದಿಸಿ ಅರ್ಥಪೂರ್ಣ ವಾಕ್ಯಗಳನ್ನು ನಿಗದಿಪಡಿಸಿದ ಆವರಣದಲ್ಲಿ ಬರೆಯಿರಿ

| | | |
|---|---|---|
| 1 | ದೇಶದ ಸೈನಿಕ ಬಲ ಪ್ರಬಲವಾಗಿರದಿದ್ದರೆ | ದೇಶ ಸುಭದ್ರವಾಗಿರುತ್ತದೆ |
| 2 | ಅಸಿ ಎಂದರೆ | ದೇಶದ ಮುನ್ನಡೆ ಸಾಧ್ಯವಿಲ್ಲ |
| 3 | ದೇಶದ ರಕ್ಷಣೆ ಮಾಡುವವರು | ರಕ್ಷಣಾ ಇಲಾಖೆಗೆ ಮೀಸಲಾಗಿಡಲಾಗುತ್ತದೆ |
| 4 | ನಮ್ಮ ದೇಶದ ಬಜೆಟ್ ನಲ್ಲಿ ಹೆಚ್ಚಿನ ಭಾಗ | ಯುದ್ಧ ಎಂದರ್ಥ |
| 5 | ದೇಶದ ಸೈನ್ಯ ಪ್ರಬಲವಾಗಿದ್ದಾಗ | ಸೈನಿಕರು |
| 6 | ನಮ್ಮ ಹಿರಿಯರ ಪ್ರಕಾರ ದೇಶದ ಪ್ರಗತಿ | ಬಲಿಷ್ಠ ಸೈನ್ಯ ಹೊಂದಿರುವ ದೇಶದವರು ನಮ್ಮ ಮೇಲೆ ಸುಲಭವಾಗಿ ಆಕ್ರಮಣ ಮಾಡುತ್ತಾರೆ |
| 7 | ರಕ್ಷಣೆ ಮತ್ತು ಕೃಷಿಯಲ್ಲಿ ಸ್ವಾವಲಂಬನೆ ಸಾಧಿಸದೆ | ಅಸಿ–ಮಸಿ–ಕೃಷಿಯನ್ನು ಅವಲಂಬಿಸಿದೆ |

ಸರಿಹೊಂದಿಸಿದ ವಾಕ್ಯಗಳನ್ನು ಕೆಳಗೆ ಬರೆಯಿರಿ

| | |
|---|---|
| 1 | ಮಾದರಿ : ದೇಶದ ಸೈನಿಕ ಬಲ ಪ್ರಬಲವಾಗಿರದಿದ್ದರೆ ಬಲಿಷ್ಠ ಸೈನ್ಯ ಹೊಂದಿರುವ ದೇಶದವರು ನಮ್ಮ ಮೇಲೆ ಸುಲಭವಾಗಿ ಆಕ್ರಮಣ ಮಾಡುತ್ತಾರೆ. |
| 2 | |
| 3 | |
| 4 | |
| 5 | |
| 6 | |
| 7 | |

## ಅಭ್ಯಾಸ ಹಾಳೆ 2

### ಅಸಿ–ಮಸಿ–ಕೃಷಿ

**ಪಾಠಭಾಗವನ್ನು ಓದಿ ಈ ಕೆಳಗಿನ ಅಪೂರ್ಣ ವಾಕ್ಯಗಳನ್ನು ಅರ್ಥಪೂರ್ಣವಾಗಿ ಪೂರ್ಣಗೊಳಿಸಿ.**

| | |
|---|---|
| ಮಾದರಿ | ಹಳ್ಳಿಗಳ ಅಭಿವೃದ್ಧಿಯೇ ______________________ |
| | ಹಳ್ಳಿಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ |

| | |
|---|---|
| 1 | ಒಕ್ಕಲಿಗ ಒಕ್ಕದಿರೆ ____________________________ |
| | |
| 2 | ಕೋಟಿ ವಿದ್ಯೆಗಳಲಿ ____________ ಮೇಟಿಯಿಂ ರಾಟೆ ನಡೆದುದಲ್ಲದೆ ________ |
| | |
| 3 | ಹಾಸಿಗೆ ಇದ್ದಷ್ಟು _________________ |
| | |
| 4 | ಕೃಷಿಕರಿಗೆ ಬೇಕಾದ ಸತ್ವವನ್ನು ______ ಮೂಲಕ ತುಂಬುವ ಕಾರ್ಯವನ್ನು ಸಾಹಿತಿಗಳು ಮಾಡಬೇಕು |
| | |
| 5 | ________ ನಮ್ಮ ನಾಡಿನ ಬೆನ್ನೆಲುಬು |
| | |

**ಕೃಷಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಪಟ್ಟಿ ಮಾಡಿ**

| |
|---|
| |

# ಅಭ್ಯಾಸ ಹಾಳೆ–3

## ಸಂಸ್ಕೃತ ಸ್ವರ ಸಂಧಿಗಳು

| |
|---|
| **ಸವರ್ಣದೀರ್ಘ ಸಂಧಿ :** ಎರಡು ಸವರ್ಣ ಸ್ವರಗಳ ನಡುವೆ ಸಂಧಿ ಕಾರ್ಯ ನಡೆದಾಗ ಅವೆರಡರ ಸ್ಥಾನದಲ್ಲಿ ಅದೇ ವರ್ಣದ ದೀರ್ಘ ಸ್ವರವು ಆದೇಶವಾಗಿ ಬರುವುದನ್ನು ಸವರ್ಣ ದೀರ್ಘ ಸಂಧಿ ಎನ್ನುವರು<br>ಮಹಾ + ಆಲಯ = ಮಹಾಲಯ, ಗಿರಿ + ಈಶ = ಗಿರೀಶ, ಗುರು + ಉಪದೇಶ = ಗುರೂಪದೇಶ<br>ಆ + ಆ = ಆ ಇ + ಈ = ಈ ಉ + ಉ = ಊ |
| **ಗುಣ ಸಂಧಿ:** ಪೂರ್ವ ಪದದ ಅಂತ್ಯದಲ್ಲಿ 'ಅ' ಅಥವಾ 'ಆ' ಸ್ವರಗಳಿದ್ದು, ಅವುಗಳಿಗೆ 'ಇ' ಅಥವಾ 'ಈ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಏ' ಸ್ವರವು, 'ಉ' ಅಥವಾ 'ಊ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಓ' ಸ್ವರವು, ಅದೇ ರೀತಿ 'ಋ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಅರ್' ಕಾರವು ಆದೇಶವಾಗಿ ಬರುತ್ತದೆ.<br>ವೀರ + ಈಶ =ವೀರೇಶ, ಮಹಾ + ಉತ್ಸವ = ಮಹೋತ್ಸವ, ರಾಜ + ಋಷಿ = ರಾಜರ್ಷಿ<br>ಅ + ಈ = ಏ, ಆ + ಉ = ಓ, ಅ + ಋ = ಅರ್ |
| **ವೃದ್ಧಿ ಸಂಧಿ:** ಅ ಆ ಕಾರಗಳಿಗೆ ಏ ಐ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಐ' ಕಾರವೂ, ಓ ಔ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಔ' ಕಾರವೂ ಆದೇಶಗಳಾಗಿ ಬರುತ್ತವೆ. ಇದಕ್ಕೆ 'ವೃದ್ಧಿಸಂಧಿ' ಎನ್ನುವರು.<br>ಜನ + ಐಕ್ಯ = ಜನೈಕ್ಯ ಜಲ + ಓಘ = ಜಲೌಘ ಏಕ + ಏಕ = ಏಕೈಕ<br>ಅ + ಐ = ಐ, ಅ + ಓ = ಔ, ಅ + ಏ = ಐ |
| **ಯಣ್ ಸಂಧಿ :** ಪೂರ್ವಪದದ ಇ, ಈ, ಉ, ಊ, ಋ ಕಾರಗಳಿಗೆ ಉತ್ತರ ಪದದಲ್ಲಿ ಸವರ್ಣವಲ್ಲದ ಸ್ವರ ಪರವಾದರೆ ಇ ಈ ಕಾರಗಳಿಗೆ 'ಯ್' ಕಾರವೂ, ಉ ಊ ಕಾರಗಳಿಗೆ 'ವ್' ಕಾರವೂ, ಋ ಕಾರಕ್ಕೆ 'ರ್' ಕಾರವು ಆದೇಶವಾಗಿ ಬರುತ್ತವೆ. ಇದಕ್ಕೆ ಯಣ್ ಸಂಧಿ ಎಂದು ಹೆಸರು<br>ಅತಿ + ಉಕ್ತಿ = ಅತ್ಯುಕ್ತಿ, ಮನು + ಅಂತರ = ಮನ್ವಂತರ, ಪಿತೃ + ಆರ್ಜಿತ = ಪಿತ್ರಾರ್ಜಿತ<br>ಇ + ಉ = ಯ್, ಉ + ಅ = ವ್, ಋ + ಆ = ರ್ |

**ಮೇಲ್ಕಂಡ ಸಂಧಿಯ ನಿಯಮಗಳು ಹಾಗೂ ಉದಾಹರಣೆಗಳನ್ನು ಓದಿ ಅರ್ಥ ಮಾಡಿಕೊಂಡು ಕೆಳಗೆ ನೀಡಿರುವ ಸಂಧಿ ಪದಗಳನ್ನು ಬಿಡಿಸಿ, ನಿಯಮಗಳನ್ನು ಅನ್ವಯಿಸಿ ಸಂಧಿಯನ್ನು ಹೆಸರಿಸಿ.**

| **ರಾಜ್ಯೋತ್ಸವ** | **ರಾಜ್ಯ +ಉತ್ಸವ** | **ಗುಣ ಸಂಧಿ** |
|---|---|---|
| ಭಾವೈಕ್ಯ | | |
| ದೇವಾಲಯ | | |
| ಕೋಟ್ಯಧೀಶ | | |
| ದಿವ್ಯೌಷಧಿ | | |
| ಮಹರ್ಷಿ | | |
| ಗಣೇಶ | | |

# ಅಭ್ಯಾಸ ಹಾಳೆ–4

## ಸಂಸ್ಕೃತ ವ್ಯಂಜನ ಸಂಧಿಗಳು

| |
|---|
| **ಜಸ್ತ್ವ ಸಂಧಿ :** ಪೂರ್ವಪದದ ಕೊನೆಯಲ್ಲಿರುವ ಕ್ ಚ್ ಟ್ ತ್ ಪ್ ವ್ಯಂಜನಗಳಿಗೆ ಯಾವ ವರ್ಣ ಪರವಾದರೂ ಅದೇ ವರ್ಗದ ಮೂರನೆಯ ವ್ಯಂಜನಾಕ್ಷರಗಳು ಅಂದರೆ ಗ್ ಜ್ ಡ್ ದ್ ಬ್ ವ್ಯಂಜನಗಳು ಆದೇಶಗಳಾಗಿ ಬರುತ್ತವೆ. ಇದಕ್ಕೆ ಜಸ್ತ್ವಸಂಧಿ ಎನ್ನುವರು.<br>ವಾಕ್ + ದೇವಿ = ವಾಗ್ದೇವಿ, ಸತ್ + ಉದ್ದೇಶ = ಸದುದ್ದೇಶ, ಅಚ್ + ಅಂತ = ಅಜಂತ<br>ಕ್ ಗ್ ತ್ ದ್ ಚ್ ಜ್ |
| **ಶ್ಚುತ್ವ ಸಂಧಿ:** ಸಕಾರ, ತವರ್ಗಾಕ್ಷರಗಳಿಗೆ ಶಕಾರ ಚವರ್ಗಾಕ್ಷರಗಳು ಪರವಾದಾಗ ಸ ಕಾರಕ್ಕೆ ಶ ಕಾರವೂ, ತ ವರ್ಗಕ್ಕೆ ಚ ವರ್ಗವೂ ಆದೇಶಗಳಾಗಿ ಬರುವುದನ್ನು ಶ್ಚುತ್ವ ಸಂಧಿ ಎನ್ನುವರು.<br>ಮನಸ್ + ಶುದ್ಧಿ = ಮನಶ್ಶುದ್ಧಿ, ಸತ್ + ಚಿತ್ರ = ಸಚ್ಚಿತ್ರ, ಜಗತ್ + ಜ್ಯೋತಿ = ಜಗಜ್ಜ್ಯೋತಿ<br>ಸ್ + ಶ್ = ಶ್, ತ್ + ಚ್ = ಚ್, ತ್ + ಜ್ = ಜ್ |
| **ಅನುನಾಸಿಕ ಸಂಧಿ :** ವರ್ಗದ ಪ್ರಥಮ ವರ್ಣಗಳಿಗೆ ಯಾವ ಅನುನಾಸಿಕಾಕ್ಷರ ಪರವಾದರೂ, ಅವುಗಳಿಗೆ ಅಂದರೆ ಕ ಚ ಟ ತ ಪ ವ್ಯಂಜನಗಳಿಗೆ ಕ್ರಮವಾಗಿ ಙ ಞ ಣ ನ ಮ ವ್ಯಂಜನಗಳು ಆದೇಶಗಳಾಗಿ ಬರುತ್ತವೆ.<br>ವಾಕ್ + ಮಯ = ವಾಙ್ಮಯ, ಷಟ್+ ಮಾಸ = ಷಣ್ಮಾಸ, ಚಿತ್ + ಮೂಲ = ಚಿನ್ಮೂಲ<br>ಕ್ = ಮ್ = ಙ ಟ್ + ಮ್ = ಣ್ ತ್ + ಮ್ = ನ್ |

**ಮೇಲ್ಕಂಡ ಸಂಧಿಯ ನಿಯಮಗಳು ಹಾಗೂ ಉದಾಹರಣೆಗಳನ್ನು ಓದಿ ಅರ್ಥ ಮಾಡಿಕೊಂಡು ಕೆಳಗೆ ನೀಡಿರುವ ಸಂಧಿ ಪದಗಳನ್ನು ಬಿಡಿಸಿ, ನಿಯಮಗಳನ್ನು ಅನ್ವಯಿಸಿ ಸಂಧಿಯನ್ನು ಹೆಸರಿಸಿ.**

| **ಚಿನ್ಮಯ** | **ಚಿತ್ + ಮಯ** | **ಅನುನಾಸಿಕ ಸಂಧಿ** |
|---|---|---|
| ಶರಚ್ಚಂದ್ರ | | |
| ಚಿದಾನಂದ | | |
| ಷಣ್ಮುಖ | | |
| ಷಡಾನನ | | |
| ವಾಗ್ದಾನ | | |
| ಸಜ್ಜನ | | |
| ಸನ್ಮಾನ | | |

# ಅಭ್ಯಾಸ ಹಾಳೆ 5

## ಬೋಧಿವೃಕ್ಷದ ಹಾಡು

### ಕೆಳಗೆ ನೀಡಿರುವ ಅಂಶಗಳನ್ನು ಓದಿ, ಕವಿಯ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯಿರಿ

| | |
|---|---|
| ಕವಿ: ಬಸವರಾಜ ಸಬರದ | ಕಾಲ:1954 |
| ಸ್ಥಳ: ಕೊಪ್ಪಳ ಜಿಲ್ಲೆಯ ಕುಕನೂರು | ಕೃತಿಗಳು: ಮೂಡಲಕ ಕೆಂಪು ಮೂಡ್ಯಾವ, ನನ್ನವರ ಹಾಡು, ಹೋರಾಟ, ನೂರು ಹನಿಗಳು, ದನಿಯೆತ್ತಿ ಹಾಡೇನ, ನರಬಲಿ, ಪದಕಟ್ಟಿ ಹಾಡೇನ, ಬೆಳದಿಂಗಳು ಬಿಸಿಲಾತು, ಪ್ರತಿರೂಪ, ರೆಕ್ಕೆ ಮೂಡಿದಾಗ |
| ಪ್ರಶಸ್ತಿಗಳು : ಕುವೆಂಪು ಸಾಹಿತ್ಯ ಪುರಸ್ಕಾರ, ಕಾವ್ಯಾನಂದ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ದೇವರಾಜ ಬಹದ್ದೂರ್ ಪ್ರಶಸ್ತಿ | |
| | |

### ಧರ್ಮ ಹಾಗೂ ಧರ್ಮ ಸ್ಥಾಪಕರನ್ನು ಸರಿ ಹೊಂದಿಸಿ ಬರೆಯಿರಿ

| ಧರ್ಮ | ಧರ್ಮಸ್ಥಾಪಕರು | ಧರ್ಮ | ಧರ್ಮ ಸ್ಥಾಪಕರು |
|---|---|---|---|
| ಬೌದ್ಧ | ಗುರುನಾನಕ್ | ಬೌದ್ಧ | ಗೌತಮ ಬುದ್ಧ |
| ಜೈನ | ಯೇಸು | | |
| ಇಸ್ಲಾಂ | ಗೌತಮ ಬುದ್ಧ | | |
| ಕ್ರೈಸ್ತ | ಮೊಹಮ್ಮದ್ ಪೈಗಂಬರ್ | | |
| ಸಿಖ್ | ಮಹಾವೀರ | | |

# ಅಭ್ಯಾಸ ಹಾಳೆ : 6

## ಘಟಕ : ಬೋಧಿವೃಕ್ಷದ ಹಾಡು

**ಮಾದರಿಯಂತೆ ಪದ್ಯಭಾಗದ ಭಾವಾರ್ಥವನ್ನು ಬರೆಯಿರಿ**

ಮಾದರಿ : ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು
ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು
ಅರಮನೆಯ ಮೋಹವನ್ನು ಹರಿದು ಹಾಕಿ ಹೋದನು
ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು

ಕವಿ ಬಸವರಾಜ ಸಬರದ ಅವರು ಬೋಧಿವೃಕ್ಷದ ಹಾಡು ಎಂಬ ಪದ್ಯಭಾಗದಲ್ಲಿ ಸಿದ್ಧಾರ್ಥ ಬುದ್ಧನಾದ ಕಥೆಯನ್ನು ಸೊಗಸಾಗಿ ಚಿತ್ರಿಸಿದ್ದಾರೆ.

ಪ್ರಸ್ತುತ ಸಾಲುಗಳಲ್ಲಿ ಸಿದ್ಧಾರ್ಥನು ಬದುಕಿನ ಅರ್ಥವನ್ನು ತಿಳಿಯಲು ಅರಮನೆಯನ್ನು ತೊರೆದು ಹೋಗುವ ಸನ್ನಿವೇಶವನ್ನು ತಿಳಿಸಿದ್ದಾರೆ. ಸಿದ್ಧಾರ್ಥನು ಮಧ್ಯರಾತ್ರಿಯ ಸಮಯದಲ್ಲಿ ಯಾರಿಗೂ ಗೊತ್ತಾಗದಂತೆ ಅರಮನೆಯನ್ನು ಬಿಟ್ಟು ಹೊರಡಲು ಸಿದ್ಧವಾಗುತ್ತಾನೆ. ತನ್ನ ಮಡದಿ ಹಾಗೂ ಮುದ್ದಿನ ಮಗನನ್ನು ಬಿಟ್ಟು, ಅರಮನೆಯ ಮೋಹವನ್ನು ತೊರೆದು ಹಾಕಿ ದೃಢ ಮನಸ್ಸಿನೊಂದಿಗೆ ಕಾಡಿನ ಕಡೆಗೆ ಪಯಣ ಬೆಳೆಸುತ್ತಾನೆ. ಇಷ್ಟು ದಿನ ಕಷ್ಟದ ಅರಿವಿಲ್ಲದೆ, ಅರಮನೆಯಲ್ಲಿ ಸುಖ ಸಂತೋಷದಿಂದಿದ್ದ ಸಿದ್ಧಾರ್ಥ ಈಗ ಗೊತ್ತುಗುರಿ ಇಲ್ಲದೆ ಅಡವಿಯ ದಾರಿಯಲ್ಲಿ ಕಲ್ಲು-ಮುಳ್ಳುಗಳನ್ನು ತುಳಿದು ದಾರಿ ತೋಚಿದ ಕಡೆ ಸಾಗುತ್ತಾನೆ ಎಂದು ಕವಿ ಹೇಳಿದ್ದಾರೆ.

ಜೀವನದ ನಿಜವಾದ ಅರ್ಥವನ್ನು ಅರಿಯಬೇಕೆಂಬ ದೃಢ ನಿಶ್ಚಯ ಸಿದ್ಧಾರ್ಥನನ್ನು ಇಂತಹ ನಿರ್ಧಾರ ಕೈಗೊಳ್ಳಲು ಪ್ರೇರೇಪಿಸಿತು ಎಂಬುದನ್ನು ನಾವು ಇಲ್ಲಿ ತಿಳಿಯಬಹುದಾಗಿದೆ.

ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು
ಕೋಗಿಲೆಯ ಹಾಡದೊಂದು ದೂರದಿಂದ ಕೇಳಿತು
ಬೆಳ್ಳಿಚುಕ್ಕಿ ಬಾನಿನಲ್ಲಿ ಆಗತಾನೆ ಬೆಳಗಿತು
ಬೋಧಿವೃಕ್ಷದಲ್ಲಿ ಮಹಾ ಬೆಳಕೊಂದು ಕಂಡಿತು

..........................................................................................................
..........................................................................................................
..........................................................................................................
..........................................................................................................
..........................................................................................................
..........................................................................................................
..........................................................................................................
..........................................................................................................
..........................................................................................................
..........................................................................................................

# ಅಭ್ಯಾಸ ಹಾಳೆ : 7

## ಭಾಷಾಂಶಗಳು

ಈ ಕೆಳಗಿನ ತತ್ಸಮ–ತದ್ಭವ ಪದಗಳನ್ನು ಸರಿಯಾಗಿ ಹೊಂದಿಸಿ ಬರೆಯಿರಿ

| ಯುದ್ಧ | ಕಜ್ಜ | ಯುದ್ಧ | ಜುದ್ಧ |
|---|---|---|---|
| ವೀರ | ಕೋಗಿಲೆ | | |
| ಅಡವಿ | ಸುಖ | | |
| ಪಕ್ಷಿ | ವರ್ಣ | | |
| ಮುಖ | ಅಟವಿ | | |
| ಬಣ್ಣ | ಕಬ್ಬ | | |
| ಯುಗ | ಬುವಿ | | |
| ಸೊಗ | ವರುಷ | | |
| ಕಾರ್ಯ | ಕಥಾ | | |
| ಕುಕಿಲ | ವ್ಯವಸಾಯ | | |
| ವರ್ಷ | ಬೀರ | | |
| ಭೂಮಿ | ಜುದ್ಧ | | |
| ಕತೆ | ಹಕ್ಕಿ | | |
| ಬೇಸಾಯ | ಜುಗ | | |
| ಕಾವ್ಯ | ಮೊಗ | | |

**ಕೆಳಗಿನ ಪದಗಳಿಗೆ ನಾನಾರ್ಥಗಳನ್ನು ಬರೆದು ವಾಕ್ಯದಲ್ಲಿ ಪ್ರಯೋಗಿಸಿ .**

**ಮಾದರಿ : ಅರಸು : ರಾಜ, ಹುಡುಕು**

ವಿಜಯನಗರದ ಅರಸು ಶ್ರೀಕೃಷ್ಣದೇವರಾಯನ ಕಾಲದಲ್ಲಿ ಚಿನ್ನ ಬೆಳ್ಳಿಯನ್ನು ಬೀದಿಯಲ್ಲಿ ಮಾರುತ್ತಿದ್ದರೆಂದು ವಿದೇಶಿ ಯಾತ್ರಿಕನೊಬ್ಬ ಹೇಳಿದ್ದಾನೆ. (ರಾಜ)

ಮನುಷ್ಯರು ಕಾಣದ ದೇವರನ್ನು ಕಲ್ಲು, ಮಣ್ಣುಗಳ ಗುಡಿಗಳಲ್ಲಿ ಅರಸುತ್ತಾರೆ. (ಹುಡುಕು)

| | | |
|---|---|---|
| ಹಿಂಡು | ಅರ್ಥ | |
| | ವಾಕ್ಯ 1 | |
| | ವಾಕ್ಯ 2 | |
| ಹೊಳೆ | ಅರ್ಥ | |
| | ವಾಕ್ಯ 1 | |
| | ವಾಕ್ಯ 2 | |
| ತೊರೆ | ಅರ್ಥ | |
| | ವಾಕ್ಯ 1 | |
| | ವಾಕ್ಯ 2 | |
| ಕಾಡು | ಅರ್ಥ | |
| | ವಾಕ್ಯ 1 | |
| | ವಾಕ್ಯ 2 | |
| ಅಲೆ | ಅರ್ಥ | |
| | ವಾಕ್ಯ 1 | |
| | ವಾಕ್ಯ 2 | |

# ಘಟಕವಾರು ರಸಪ್ರಶ್ನೆಗಳ ಲಿಂಕ್ ಗಳು

**ಅಸಿ - ಮಸಿ - ಕೃಷಿ**

https://quizzory.in/id/6118a6b1462e06081732b0f1

**ಬೋಧಿವೃಕ್ಷದ ಹಾಡು**

https://quizzory.in/id/6118a4b1fd563b087dc7e3b5

**ಸವಿಚೈತ್ರ**

https://quizzory.in/id/6118afc7c55ceb086c0cd1bc